# ಸುಲಭ ಪೂಜೆಯ ಮಾಡಿ

1. **Ref.:** Shri Purandara Dasara Sahitya Part – 2, Aartha Bhaava, edited by Shri Betageri Krishna Sharma and Shri Bengeri Huchhu Rayaru, page No. 143
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 311
3. **Note:** Lyrics mentioned without highlights are as per Ref. 2. The wordings given separately in yellow highlights are as per Ref. 2.
4. **Note:** Singer has followed lyrics as in Ref. 2.

ರಾಗ: ಕಾಂಬೋಧಿ ತಾಳ: ಝಂಪೆ

ಸುಲಭ ಪೂಜೆಯ ಮಾಡಿ ಬಲವಿಲ್ಲದವರು || ಪ ||
ನಳಿನನಾಭನ ಪಾದ ನಳಿನ ಸೇವಕರು || ಅಪ ||

ಇರುಳು ಹಚ್ಚುವ ದೀಪ ಹರಿಗೆ ನೀರಾಜನವು
ಮರೆ ಮಾಡುವ ವಸ್ತ್ರ ಪರಮ ಮಡಿಯು
ತಿರುಗಾಡಿ ದಣಿಯುವುದೆ ಹರಿಗೆ ಪ್ರದಕ್ಷಿಣೆಯು
ಹೊರಳಿ ಮಲಗುವುದೆಲ್ಲ ಹರಿಗೆ ವಂದನೆಯು || 1 ||

ನುಡಿವ ಮಾತುಗಳೆಲ್ಲ ಕಡಲಶಯನನ ಜಪವು
ಮಡದಿ ಮಕ್ಕಳು ಮತ್ತೆ ಒಡನೆ ಪರಿವಾರ
ನಡುಮನೆಯು ಅಂಗಳವು ಉಡುಪಿ ವೈಕುಂಠಗಳು
ಎಡ ಬಲದ ಮನೆಯವರು ಕಡು ಭಾಗವತರು || 2 ||

ಹೀಗೆ ಅನುದಿನ ತಿಳಿದು ಹಿಗ್ಗುವ ಜನರ ಭವ-
ರೋಗ ಪರಿಹಾರವು ಮೂಜಗದಿ ಸುಖವು
ಹೋಗುತಿದೆ ಈ ಆಯು ಬೇಗದಿಂದಲಿ ನಮ್ಮ
ಯೋಗೇಶ ಪುರಂದರ ವಿಠಲನ ನೆನೆ ನೆನೆದು || 3 ||

**Note:** The below mentioned lyrics are as per Ref. 1. The wordings here are slightly different.

ರಾಗ: ಕಾಂಬೋಧಿ ತಾಳ: ಝಂಪೆ

ಸುಲಭ ಪೂಜೆಯ ಕೇಳಿ ಬಲವಿಲ್ಲದವರು
ಕಾಲ ಕಾಲದ ಕರ್ಮ ಕಮಲಾಕ್ಷಗರ್ಪಿಸಿರಿ ॥ ಪ ॥

ಇರುಳು ಹಚ್ಚುವ ದೀಪ ಹರಿಗೆ ನೀರಾಜನವು
ಮರು ಉಡುವ ಧೋತರವು ಪರಮ ವಸ್ತ್ರ
ತಿರುಗಾಡಿ ದಣಿಯುವುದು ಹರಿಗೆ ಪ್ರದಕ್ಷಿಣೆಯು
ಮರಳಿ ಹೊಡ-ಮರಳುವುದು ನೂರೆಂಟು ದಂಡ ॥ ೧ ॥

ನುಡಿವ ಮಾತುಗಳೆಲ್ಲ ಪಾಂಡುರಂಗನ ಜಪವು
ಮಡದಿ ಮಕ್ಕಳು ಎಲ್ಲ ಒಡನೆ ಪರಿವಾರ
ನಡು-ಮನೆಯ ಅಂಗಳವು ಉಡುಪಿ ಭೂ-ವೈಕುಂಠ
ಎಡ-ಬಲದ ಮನೆಯವರು ಕಡು ಭಾಗವತರು ॥ ೨ ॥

ಹೀಗೆ ಈ-ಪರಿಯಲ್ಲಿ ನಿತ್ಯ ನೀವರಿತಿರಲು
ಜಗದೊಡೆಯ ಶ್ರೀ ಕೃಷ್ಣ ದಯವ ತೋರುವನು
ಬೇಗದಿ ತಿಳಿದು ಕೇಳಿ ಹೋಗುತಿದೆ ಆಯುಷ್ಯ
ಯೋಗಿ ಪುರಂದರ ವಿಠಲ ಸಾರಿ ಪೇಳಿದನು ॥ ೩ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಸುಲಭ ಪೂಜೆಯೆಂದರೆ ಮಾನಸ ಪೂಜೆ. ಹೊರಗಣ ಯಾವ ಪರಿಕರದ, ದೇಹ ಶ್ರಮದ, ಧನ ವ್ಯಯದ, ವಿಧಿ ನಿಯಮಗಳ ಅಗತ್ಯವಿರದೆ, ಅಂತರಂಗದಲ್ಲೇ ನಡೆಸುವ ಪೂಜೆ. ಬಲವಿಲ್ಲದವರು, ಎಂದರೆ ವಿದ್ಯಾಬಲ, ಜ್ಞಾನಬಲ, ಸಂಸ್ಕಾರಬಲ, ಧನಬಲ, ದೇಹಬಲ ಎಂಬ ಬಲಪಂಚಕವಿಲ್ಲದವರು ಕೂಡ ಇದನ್ನು ಮಾಡಬಹುದು. ಆದರೆ ಭಕ್ತಿಯೊಂದು ಅನಿವಾರ್ಯವಾಗಿ ಇದ್ದೇ ಇರಬೇಕು.

ಬಿಂಬೋಪಾಸನೆಯಲ್ಲಿ ಸರ್ವ ಸಮರ್ಪಣ ಭಾವ ಮುಖ್ಯವಾದುದು. ಜೀವರಿಗೆ ಬಿಂಬರೂಪೀ ಪರಮಾತ್ಮನೇ ಪ್ರೇರಕನೆಂದೂ ನಿಯಾಮಕನೆಂದೂ ಮನದಟ್ಟುಮಾಡಿಕೊಂಡು, ದೇಹೇಂದ್ರಿಯ ಮನಸ್ಸುಗಳಿಂದ ಮಾಡುವ ಎಲ್ಲ ಕೆಲಸಕ್ಕೂ ಅವನೇ ಮುಖ್ಯ ಕರ್ತ, ಮುಖ್ಯ ಭೋಕ್ತೃ ಎಂದು ಭಾವಿಸಿ,

ಮಾಡುವುದೆಲ್ಲ ಅವನ ಪೂಜೆಯೇ ಎಂದು ತನ್ನ ಕರ್ತೃತ್ವವನ್ನೂ ಭೋಕ್ತೃತ್ವವನ್ನೂ ಅವನಿಗೇ ಸಮರ್ಪಿಸುವುದು ಈ ವಿವರದ ಸ್ವಾರಸ್ಯ. 'ನಾಹಂ ಕರ್ತಾ, ಹರಿಃ ಕರ್ತಾ, ತತ್ಪೂಜಾ ಕರ್ಮ ಚಾಖಿಲಂ' ಎನ್ನುವ ಆಚಾರ್ಯೋಕ್ತಿಯ ಛಾಯೆ.

ಭಕ್ತಿ ಸಾಧನೆ ಫಲಿಸಿದ ಮೇಲೆ ಭಕ್ತನು ಮಾಡುವ ಪ್ರತಿಯೊಂದು ಕಾರ್ಯವು ಶ್ರೀಹರಿಯ ಪೂಜೆಯೇ ಎನಿಸಿ, ಅವನಿಗೆ ಪೂಜೆ ಎಂಬುದು ಸುಲಭವೆನಿಸುವುದು. ಎಂತಲೇ ಭಕ್ತ ತನ್ನ ಪ್ರತಿಯೊಂದು ಕರ್ಮದ ಫಲವನ್ನೂ ಆಗಾಗ ಹರಿಗೆ ಅರ್ಪಿಸುತ್ತಿರಬೇಕೆಂದು ದಾಸರ ಅಭಿಪ್ರಾಯ.

**ಮರುವುಡುವ** = ವಸ್ತ್ರಾಂತರವಾಗಿ ಉಡುವ ವಸ್ತ್ರ

**ದಂಡ** = ದಂಡವತ್ ನಮಸ್ಕಾರ

**ನೀರಾಜನ** – ನೀಲಾಂಜನ, ದೀಪ.

**ಭೂ ವೈಕುಂಠ** = ತಿರುಪತಿ

**Classification:** Keerthane
**Ankita:** purandara vittala
**Location:** NA
**Category:** Artha Bhava, Bimba Roopa
**Sub-Category:** pooje, bimba roopa, Krishna, irulu, vastra, pradakshine, japa, patni, makkalu, Udupi, vaikunta, mane, bhagavatha, bhava, jana, roga, sukha, panduranga, loka, daya, yogi,
**Pravachana:** NA
**Explanation:** NA